ಹಾಗೆ ಏನೇನೋ ಮಾತುಗಳು ಮಲ್ಲಿಕಾ ಬಾಯಿಂದ ಹೊರಬರತೊಡಗಿದವು. ಇಡೀ ಜಗತ್ತು ತನ್ನ ವಿರುದ್ಧ ಮಸಲತ್ತು ಮಾಡುತ್ತಿದೆ ಎಂದು ಶುರುವಾದ ಅವಳ ದೂರು ರಮೇಶನ ಕಡೆಗೂ ತಿರುಗಿತು! ಈಚೆಗೆ ತನ್ನ ಯಾವ ಪ್ರೋಗ್ರಾಮನ್ನೂ ರಮೇಶ ಇಷ್ಟಪಡುತ್ತಿಲ್ಲ ಎಂಬುದರಿಂದ ಹಿಡಿದು, ಹೊಸ ರಿಪೋರ್ಟರ್ ನವನೀತಾ ರೆಡ್ಡಿಗೆ ಒಳ್ಳೆಯ ಪ್ರೋಗ್ರಾಮುಗಳು ಸಿಗುತ್ತಿರುವುದರ ಹಿಂದೆ ರಮೇಶನ 'ಕುಮ್ಮಕ್ಕು' ಇರುವಂತಿದೆ... ಅವಳ ಜಾತಿ, ಅವನ ಜಾತಿ... ಎರಡೂ ಒಂದೇ... ಹೀಗೆ ಅವಳ ಆಪಾದನೆಯ ಪಟ್ಟಿ ಬೆಳೆಯತೊಡಗಿತ್ತು. ಈಚೆಗೆ 'ರ್‍ಯಾಂಬೋ ರಿಪೋರ್ಟರ್' ಎಂಬ ಪ್ರೋಗ್ರಾಮಿನ 'ಲೇಡಿ ರಿಪೋರ್ಟರ್ ರೋಲ್ ಮಲ್ಲಿಕಾಗೆ ಪಕ್ಕಾ ಸೂಟ್ ಆಗುತ್ತೆ' ಎಂದು ಪ್ರೊಡ್ಯೂಸರ್ ಮತ್ತೆ ಮತ್ತೆ ಹೇಳಿದ್ದರೂ, ಆ ರೋಲ್ ನವನೀತಾಗೆ ಹೋಗಿದ್ದರಲ್ಲೂ ರಮೇಶನ 'ಕೈವಾಡ'ವಿದ್ದಂತೆ ಅವಳಿಗೆ ಕಂಡಿತ್ತು...

ಚಾನಲ್ಲಿನ ರಾಜಕೀಯ ವರದಿಗಳಲ್ಲಿ ಇಡೀ ದಿನ ಬಳಸುವ, 'ಕೈವಾಡ', 'ಕುಮ್ಮಕ್ಕು' 'ಷಡ್ಯಂತ್ರ'... ಈ ಥರದ ಪದಗಳೇ ತುಂಬಿದ್ದ ಆಪಾದನೆಗಳು ಮಲ್ಲಿಕಾ ಬಾಯಿಂದ ಹೊರಬೀಳತೊಡಗಿದಾಗ ರಮೇಶ ಶಾಕಾಗಿ ನಿಂತ. ಮಲ್ಲಿಕಾ ಕೊಟ್ಟ ವಿವರಗಳಲ್ಲಿ ಅಷ್ಟಿಷ್ಟು ವಾಸ್ತವವಿದ್ದರೂ, ವ್ಯಾಖ್ಯಾನ ಮಾತ್ರ ಪೂರಾ ತಪ್ಪಾಗಿತ್ತು! ಅವಳು ಹೇಳಿದ್ದ ಯಾವುದರಲ್ಲೂ ರಮೇಶನ 'ಕೈವಾಡ' 'ಕುಮ್ಮಕ್ಕು' ಯಾವುದೂ ಇರಲಿಲ್ಲ. ಹಾಗೆ ನೋಡಿದರೆ, ಮಲ್ಲಿಕಾ ಹಲವು ಸಲ ಕೃತಜ್ಞತೆಯಿಂದ ನೆನಸಿಕೊಂಡಂತೆ, ಒಂದರ್ಥದಲ್ಲಿ ಅವಳನ್ನು ಇಲ್ಲಿಯತನಕ ತಂದವನು ರಮೇಶನೇ. ಮಲ್ಲಿಕಾ ರಿಪೋರ್ಟರ್ ಆಗುವುದಕ್ಕಿಂತ ಮೊದಲು ಟೀವಿ ಸೀರಿಯಲ್ಲುಗಳಿಗೆ ಕತೆ ಬರೆಯುತ್ತಿದ್ದಳು. ಆ ಕತೆಗಳ ಮೊದಲ ಕೇಳುಗ ಅವನೇ; ಮೊದಮೊದಲು ಅವಳ ಕತೆಗಳಿಗೆ ಪ್ರೊಡ್ಯೂಸರುಗಳನ್ನು ಹುಡುಕಿಕೊಟ್ಟವನೂ ಅವನೇ. ತನ್ನ ಕತೆಗಳ ಬಗ್ಗೆ ಖಡಕ್ ಅಭಿಪ್ರಾಯ ಕೊಡುವುದು ಅವನ ಸಹಜ ಗುಣವೆಂಬುದು ಮಲ್ಲಿಕಾಗೆ ಗೊತ್ತಿತ್ತು. ಆದರೂ ರಮೇಶ ತನ್ನ ಕತೆಯನ್ನು ರಿಜೆಕ್ಟ್ ಮಾಡಿದರೆ, ತನ್ನನ್ನೇ ರಿಜೆಕ್ಟ್ ಮಾಡಿದಂತಾಗಿ ಮಲ್ಲಿಕಾ ರೇಗುತ್ತಿದ್ದಳು! ಮಲ್ಲಿಕಾಳ ಬೆಕ್ಕಿನ ಕಣ್ಣನ್ನೇ ನೋಡುತ್ತಾ ಅವಳು ಸೀರಿಯಲ್ಲಿಗೆಂದು ಹೇಳುತ್ತಿದ್ದ ಕತೆಗಳನ್ನೆಲ್ಲ ಸುಮ್ಮಸುಮ್ಮನೆ 'ಸೂಪರ್' ಎಂದು ಮೆಚ್ಚುತ್ತಿದ್ದವರು ಅವಳ ಕತೆಗಳನ್ನು ಎಂದೂ ಸೀರಿಯಲ್ ಮಾಡದೆ ಅಲೆಸುತ್ತಿದ್ದರು; 'ಇದನ್ನ ಕ್ರೈಂ ಸ್ಟೋರಿ ಮಾಡಿ', 'ತ್ರಿಕೋನ ಪ್ರೇಮ ಕತೆ ಮಾಡಿ' ಎಂದು ಸತಾಯಿಸುತ್ತಿದ್ದರು; ಇದರಿಂದ ಮಲ್ಲಿಕಾಳ ಮುಖ ಇಳಿಬಿದ್ದಾಗಲೆಲ್ಲ, ರಮೇಶ್ ಅವಳ ಅಸಲಿ ಪ್ರತಿಭೆಯ ಬಗ್ಗೆ ಮಾತಾಡಿ, ಅವಳಲ್ಲಿ ವಿಶ್ವಾಸ ತುಂಬುತ್ತಿದ್ದ.

ಈ ನಡುವೆ ಮಲ್ಲಿಕಾ ಸೀರಿಯಲ್ಲುಗಳಲ್ಲಿ ನಟಿಸುತ್ತೇನೆಂದಾಗ ಮೊದಲಿಗೆ ಒಂದೆರಡು ಪಾತ್ರಗಳನ್ನೂ ರಮೇಶ ಕೊಡಿಸಿದ್ದ. ಆದರೂ ಪ್ರೊಡ್ಯೂಸರೊಬ್ಬನ ತಂಡಕ್ಕೆ ಯಾವ ಕಾರಣಕ್ಕೂ ಹೋಗದಂತೆ ಮಲ್ಲಿಕಾಗೆ ಸೂಕ್ಷ್ಮವಾಗಿ ಸೂಚಿಸಿದ್ದವನೂ ಅವನೇ. ಕೆಟ್ಟ ಅಸೂಯೆಯ ಗಳಿಗೆಯಲ್ಲಿ ತಾನು ಹಾಗೆ ಸೂಚಿಸಿರಬಹುದೆಂದು ಮುಂದೊಮ್ಮೆ ಅವಳೆದುರು ತಪ್ಪೊಪ್ಪಿಕೊಂಡವನೂ ಅವನೇ; ಸದರಿ ಪ್ರೊಡ್ಯೂಸರ್ ಮಲ್ಲಿಕಾಗೆ 'ಮೀಡಿಯಾ ಇಂಟರ್‌ನ್ಯಾಷನಲ್' ಗ್ರ್ಯಾಂಟ್ ಕೊಡಿಸಿದ್ದ ಕಾಲದಲ್ಲಿ ಮಲ್ಲಿಕಾ ಆ ಪ್ರೊಡ್ಯೂಸರನನ್ನು ಸುಮ್ಮಸುಮ್ಮನೆ ಹೊಗಳುತ್ತಿದ್ದುದು, ಓಲೈಸುತ್ತಿದ್ದುದು ಕೂಡ ತನ್ನ ಅಸೂಯೆಗೆ ಕಾರಣವಿರಬಹುದು ಎಂಬುದನ್ನೂ ರಮೇಶ್ ಒಪ್ಪಿಕೊಂಡಿದ್ದ. ಇನ್ನು ಕೆಲವು ಸಲ ರಮೇಶ್ ನಿಜವಾದ ಕಾಳಜಿಯಿಂದ ಹೇಳಿದ್ದನ್ನೂ ಅನುಮಾನಿಸಿ ಹುಬ್ಬುಗಂಟಿಕುತ್ತಿದ್ದ ಮಲ್ಲಿಕಾ, ತನ್ನ ತಿಳಿಮನಸ್ಸಿನ ಗಳಿಗೆಯಲ್ಲಿ, 'ನೀನು ಅವತ್ತು ಹೇಳಿದ್ದು ನಿಜ ರಮೀ...' ಎಂದು ಮಗುವಿನಂತೆ ಗೋಣು ಹಾಕಿದ್ದೂ ಉಂಟು! ಆದರೆ, ಇದೆಲ್ಲ ಮಲ್ಲಿಕಾ ಲೆಹರ್ ಚಾನಲ್ಲಿನ ರಿಪೋರ್ಟರ್ ಆಗಿ, ಆಂಕರ್ ಆಗಿ ನೆಲೆಯೂರುವ ಮೊದಲು ಆಗಿದ್ದು... ಅದೆಲ್ಲ ಹತ್ತಿರ ಹತ್ತಿರ ಏಳೆಂಟು ವರ್ಷದ ಹಿಂದಿನ ಕತೆ...